# ಸೆಂಟಿಮೆಂಟ್ ಸೆಲೆ ಸ್ಟೇಟ್ಮೆಂಟ್ ಓಲೆ



**ಪುಟಾಣಿ ಸ್ಟಡ್‌ಗಳಿಂದ ಹಿಡಿದು ಬಗೆ ಬಗೆಯ ಜುಮ್ಕಿಯವರೆಗೂ ಮಾನಿನಿಯರನ್ನು ಆಕರ್ಷಿಸುವ ಓಲೆಗಳು ಇದೀಗ ಸ್ಟೇಟ್ಮೆಂಟ್ ಕಿವಿಯೋಲೆ ರೂಪದಲ್ಲಿ ಟ್ರೆಂಡ್ ಸೃಷ್ಟಿಸಿವೆ. ಬೆಡಗಿಯರ ಚೆಲುವನ್ನು ದುಪ್ಪಟ್ಟಾಗಿಸಿವೆ.**

■ ಸುರೇಖಾ ಹೆಗಡೆ

ಫ್ಯಾಷನ್ ಮೋಡಿಗೆ ಒಳಗಾಗದ ಮಹಿಳೆಯರಿಲ್ಲ. ಊಸರವಳ್ಳಿಯಂತೆ ಕ್ಷಣಕ್ಕೊಂದೊಂದು ರಂಗಿನಲ್ಲಿ ಜನರ ಮುಂದೆ ಕಾಣಿಸಿಕೊಳ್ಳುವ ಈ ಮಾಯಾಲೋಕಕ್ಕೆ ಎಲ್ಲರೂ ಬೆರಗಾಗುವವರೇ. ಸದ್ಯದ ಮಟ್ಟಿಗೆ ಫ್ಯಾಷನ್ ಓಣಿಯಲ್ಲಿ ಸದ್ದು ಮಾಡುತ್ತಿರುವುದು ಸ್ಟೇಟ್ಮೆಂಟ್ ಕಿವಿಯೋಲೆಗಳು. ಗಾತ್ರದಲ್ಲಿ ದೊಡ್ಡದಾಗಿ ಥಟ್ಟನೆ ಕಣ್ಸೆಳೆವ ಕಾರಣಕ್ಕೆ ಇವುಗಳಿಗೆ ಸ್ಟೇಟ್ಮೆಂಟ್ ಕಿವಿಯೋಲೆ ಎಂಬ ಹೆಸರು ಬಂದದ್ದು. ಮೊದಲೆಲ್ಲ ಲಂಬಾಣಿ ಜನಾಂಗದವರು, ಸಿನಿಮಾ ನಟಿಯರು ದೊಡ್ಡ ದೊಡ್ಡ ಕಿವಿಯೋಲೆಗಳನ್ನು ಧರಿಸಿದರೆ ನಗುತ್ತಿದ್ದವರೇ ಹೆಚ್ಚು. ಆದರೆ ದಿನಕಳೆದಂತೆ ದೊಡ್ಡ ವಿನ್ಯಾಸದ ಆಭರಣಗಳೇ ಟ್ರೆಂಡ್ ಆಗಿದೆ.

'ಹಳೆ ಬೇರು ಹೊಸ ಚಿಗುರು' ಎನ್ನುವಂತೆ ಫ್ಯಾಷನ್ ಕ್ಷೇತ್ರದಲ್ಲಿಯೂ ವಿನ್ಯಾಸದ ಬೇರು ಇರುವುದು ಹಳೆಯ ಕಾಲದ್ದೇ. ಆದರೆ ವಿನ್ಯಾಸವನ್ನು ಮಾತ್ರ ಇನ್ನಷ್ಟು ಮತ್ತಷ್ಟು ಶ್ರೀಮಂತಗೊಳಿಸಲಾಗಿದೆ. ಭುಜ ತಾಕುವ ರಿಂಗ್‌ಗಳು, ಹಕ್ಕಿಪುಕ್ಕಗಳ ವಿನ್ಯಾಸ, ಮುತ್ತುಗಳು, ಹರಳುಗಳು ಮೆಟಲ್, ಚೈನ್ ವಿನ್ಯಾಸದ ಕಿವಿಯೋಲೆಗಳು ಓಲೆ ಪ್ರಿಯರ ಚಿತ್ತ ಸೆಳೆಯುತ್ತಿವೆ. ನಟಿಮಣಿಯರು ಇಂಥ ಓಲೆಗಳನ್ನು ಧರಿಸಿ ಟೀವಿ ಪರದೆ ಮೇಲೆ ಎದುರಾದರೆ ಸ್ವಲ್ಪವೇ ದಿನಗಳಲ್ಲಿ ಸಾಮಾನ್ಯರ ಕಿವಿಗಳಲ್ಲಿಯೂ ರಾರಾಜಿಸುತ್ತದೆ ಎಂದೇ ಅರ್ಥ. ಸಿನಿಮಾಗಳಲ್ಲಷ್ಟೇ ಅಲ್ಲ ಸದ್ಯ ಫೇಸ್‌ಬುಕ್ ಪುಟಗಳಲ್ಲಿ ಕಾಣುವ ಚಿತ್ರಭಿತ್ತಿಗಳಲ್ಲಿಯೂ ಯುವತಿಯರು ಕಾಣಿಸಿಕೊಳ್ಳುವುದು ಇಂಥವೇ ಕಿವಿಯೋಲೆಗಳಲ್ಲಿ. ಟೀವಿ ನಿರೂಪಕಿಯರಿಂದ ಹಿಡಿದು, ಧಾರಾವಾಹಿಗಳಲ್ಲಿ ಕಾಣಿಸಿಕೊಳ್ಳುವ ಮಾಡರ್ನ್ ಹುಡುಗಿಯರಿಗೆ ಲುಕ್ ನೀಡುತ್ತಿರುವುದು ಸ್ಟೇಟ್ಮೆಂಟ್ ಕಿವಿಯೋಲೆಗಳು. ಇತ್ತೀಚೆಗೆ ಬರುತ್ತಿರುವ ಸಾಕ್ಷ್ಯಚಿತ್ರ, ಧಾರಾವಾಹಿಗಳಲ್ಲಿಯೂ ಕಿವಿಯೋಲೆಗಳಿಗೆ ಪ್ರಾಧಾನ್ಯ ಸಿಗುತ್ತಿದೆ.